OS No. 91/2022 PW-1

<u>**ದಿನಾಂಕ 16.07.2025 ರಂದು ಸಾಕ್ಷಿ ಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಮುಂದುವರೆದ ಪಾಟೀ ಸವಾಲುಃ 1 ರಿಂದ 5 ನೇ ಪ್ರತಿವಾದಿ ಪರ ಶ್ರೀ ಕೆ ಟಿ ಟಿ ವಕೀಲರಿಂದಃ**</u>

ನನ್ನ ಹೆಸರಿನಲ್ಲಿರುವ ಚೆಕ್ ಅನ್ನು ಕೊಟ್ಟಿರುತ್ತೇನೆ. ಸದರಿ ಚೆಕ್ 10.12.2021 ರಂದು ನಗದಾಗಿದೆ. ದಾವಾ ಆಸ್ತಿಯನ್ನು ನೋಡಿರುತ್ತೇನೆ. ದಾವಾ ಆಸ್ತಿಯ ದಕ್ಷಿಣಕ್ಕೆ ನನ್ನ ಅಕ್ಕದ ಆಸ್ತಿ ಇದೆ. ನನ್ನ ಅಕ್ಕನ ಆಸ್ತಿಯ ಸರ್ವೆ ನಂಬರ್ 273/2 ಆಗಿರುತ್ತದೆ. ಸರ್ವೆ ನಂಬರ್ 276/2ಎ ನ ಒಟ್ಟು ವಿಸ್ತೀರ್ಣ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಎಷ್ಟು ಅನುಭೋಗದಾರರು ಇದ್ದಾರೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಪ್ರತ್ಯೇಕವಾದ ಸರ್ವೇ ನಂಬರ್ ಹೊಂದಿಲ್ಲ ಎಂದರೆ ಗೊತ್ತಿಲ್ಲ. ವ್ಯವಹಾರ ಆಗುವ ಮೊದಲು ಪಹಣಿಯನ್ನು ನೋಡಿರುತ್ತೇನೆ. ಇದನ್ನು ಹೊರತುಪಡಿಸಿ ಬೇರೆ ದಾಖಲೆ ನೋಡಿಲ್ಲ. ಸದರಿ ಪಹಣಿಯನ್ನು ಓದಿ ತಿಳಿದುಕೊಂಡಿಲ್ಲ. ನಿಪಿ-1 ರ ಕರಾರ ಪತ್ರವನ್ನು ಯಾರು ಬರೆಸಿದವರು ಎಂದು ಗೊತ್ತಿಲ್ಲ. ಪ್ರತಿವಾದಿಯವರಿಗೆ ಸಹಿ ಮಾಡುವುದಕ್ಕೆ ಬಿಟ್ಟರೆ ಬೇರೆ ಜ್ಞಾನ ಇಲ್ಲ ಎಂದರೆ ಗೊತ್ತಿಲ್ಲ. ಕರಾರು ಪತ್ರದಲ್ಲಿರುವ ವಿಚಾರ ಗೊತ್ತಿದೆ. ದಾವಾ ಆಸ್ತಿ ಅಳತೆ ಮಾಡಿಸಿದ ಬಗ್ಗೆ ಗೊತ್ತಿಲ್ಲ. ಕ್ರಯ ದ ಮೊದಲು 11(ಎ) ನಕ್ಷೆ ಮಾಡುವ ಬಗ್ಗೆ ಗೊತ್ತಿದೆ. ಈ ಬಗ್ಗೆ ಪ್ರತಿವಾದಿಯವರು ಮಾಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾವು ಕೊಟ್ಟ ನೋಟೀಸ್ ನಲ್ಲಿ ನಕ್ಷೆ ಮಾಡಿಲ್ಲ ಎಂದು ನಮೂದು ಇರುವ ಬಗ್ಗೆ ಗೊತ್ತಿಲ್ಲ. ನಾವು ಮತ್ತು ಪ್ರತಿವಾದಿಯವರು ಸೇರಿ 11(ಎ) ನಕ್ಷೆ ಗೆ ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಈ ಪ್ರಕಾರ ಅಳತೆ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಈ ಸಮಯದಲ್ಲಿ ನಾನು ಹಾಜರಿದ್ದೆ ಎಂದರೆ ಸುಳ್ಳು.

ದಿಃ01.02.2022 ರಂದು ಅಳತೆ ಮಾಡಿದ್ದಾರೆಂದರೆ ಸುಳ್ಳು. ಅಳತೆ ಸಮಯದಲ್ಲಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇಂದರೆ ಸುಳ್ಳು. ವಕೀಲರು ದಾಖಲೆಯನ್ನು ಅಂದರೆ ಮಹಜರ್ ಅನ್ನು ತೋರಿಸಿ ಸಹಿಯನ್ನು ತೋರಿಸಿದಾಗ ಅದನ್ನು ತಿರಸ್ಕರಿಸುತ್ತಾರೆ.

ಪ್ರತಿವಾದಿಯವರು ಯಾವ ಕಾರಣಕ್ಕೆ ಕ್ರಯ ಮಾಡಿಕೊಟ್ಟಿಲ್ಲ ಎಂದು ನನಗೆ ಗೊತ್ತಿಲ್ಲ. ಅಳತೆ ಸಮಯದಲ್ಲಿ ಸರ್ವೆ ನಂಬರ್ ಅದಲು ಬದಲು ಆಗಿರುವುದು ಕಂಡು ಬಂದಿದ್ದರಿಂದ ಕ್ರಯ ಮಾಡಿಕೊಡಲು ಆಗಿಲ್ಲ ಎಂದರೆ ಗೊತ್ತಿಲ್ಲ. ಪ್ರತಿವಾದಿಯವರು ಸಲ್ಲಿಸಿರುವ ತಕರಾರಿನ ಬಗ್ಗೆ ಗೊತ್ತು. ಸದರಿ ತಕರಾರನ್ನು ಓದಿ ತಿಳಿದುಕೊಂಡಿಲ್ಲ. ಪ್ರತಿವಾದಿಯವರು ಪೋಡಿಯನ್ನು ಪ್ರಶ್ನೆ ಮಾಡುತ್ತೇವೆಂದು ತಿಳಿಸಿದ್ದರು ಎಂದರೆ ಗೊತ್ತಿಲ್ಲ.  ದಾವಾ ಆಸ್ತಿಯಲ್ಲಿ ಪ್ರತಿವಾದಿಯವರು ಸ್ವಾದೀನದಲಿಲ್ಲ ಎಂದರೆ ಸುಳ್ಳು. ಪ್ರತಿವಾದಿಯವರು ಸರ್ವೆ ನಂಬರ್ 276/2(ಬಿ) ನಲ್ಲಿ ಸ್ವಾದೀನದಲ್ಲಿದ್ದಾರೆಂದರೆ ಗೊತ್ತಿಲ್ಲ. ಪೋಡಿ ಬದಲಾವಣೆ ಮಾಡಿಕೊಳ್ಳುವವರೆಗೂ ಆಗುವುದಿಲ್ಲ ಹಣವನ್ನು ವಾಪಸ್ಸು ಪಡೆಯಿರಿ ಎಂದು ನನಗೆ ತಿಳಿಸಿದರು ಎಂದರೆ ಸುಳ್ಳು. ಈ ವಿಷಯ ಅಳತೆ ದಿನ ಗೊತ್ತಾಯಿತು ಎಂದರೆ ಸುಳ್ಳು. ದಾವಾ ಸರ್ವೇ ನಂಬರ್ ಸ್ವತ್ತನ್ನು ಪ್ರತಿವಾದಿಯವರಿಗೆ ಮಾರಾಟ ಮಾಡುವ ಯಾವುದೇ ಹಕ್ಕು ಇಲ್ಲ ಎಂದರೆ ಸುಳ್ಳು.

ವ್ಯವಹಾರದಲ್ಲಿ ಶಿವಕುಮಾರ್ ಬಿ ಮತ್ತು ರಾಜೀವ್ ರವರು ಸೇರಿದ್ದರು. ಇವರ ಸಮ್ಮುಖದಲ್ಲಿ ಪ್ರತಿವಾದಿಯವರು 5 ಲಕ್ಷ ಹಣವನ್ನು ಸಾಲವಾಗಿ ನನ್ನಿಂದ ಪಡೆದಿದ್ದಾರೆಂದರೆ ಸುಳ್ಳು. ಸಾಲದ ಭದ್ರತೆಗಾಗಿ ನಿಪಿ-1 ಅನ್ನು ಬರೆದುಕೊಟ್ಟಿರುತ್ತಾರೆಂದರೆ ಸುಳ್ಳು. ಸಾಲ ಮರುಪಾವತಿ ಸಮಯದಲ್ಲಿ ನನಗೆ ಜಮೀನು ಬೇಕು ಎಂದರೆ ಹಠ ಮಾಡಿದೆ ಎಂದರೆ ಸುಳ್ಳು. ಪಂಚಾಯತಿದಾರರ ಸಲಹೆ ಮೇರೆಗೆ ಅಳತೆಗೆ ಅರ್ಜಿಯನ್ನು ಹಾಕಿದ್ದೆವು ಎಂದರೆ ಸುಳ್ಳು. ಪ್ರತಿವಾದಿಯವರು ಸ್ವಾದೀನದಲ್ಲಿರುವ ಆಸ್ತಿಗೆ ಖಾತೆ, ಪಹಣಿ, ಇಲ್ಲ ಎಂದರೆ ಗೊತ್ತಿಲ್ಲ. ನಿಪಿ-1 ಕರಾರು ಪತ್ರವನ್ನು ಪ್ರತಿವಾದಿಯವರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸುಳ್ಳು.. ಪ್ರತಿವಾದಿಯವರು ಸ್ವಾದೀನದಲ್ಲಿರುವ ಆಸ್ತಿಯ ಬಗ್ಗೆ ದಾಖಲೆಯನ್ನು ನೀಡಿಲ್ಲ.

<u>**ಮರುವಿಚಾರಣೆಃ ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**